ವಿರಬೇಕು. ನೀವು ನೀರಾವರಿ ವಲಯ, ಸಂಪರ್ಕ ಮಂತ್ರಿ ಕಟ್ಟಿಡ ವಲಯ ಹಾಗೂ ರಾಷ್ಟ್ರೀಯ ಹೆದ್ದಾರಿ ವಲಯಗಳಿಗೆ ಒಟ್ಟು ೬೮.೮೭ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಅವರ ಮುಂದಿನ ಪ್ರಶ್ನೆ ಏನಿದೆ ಅಂದರೆ ೧-೩-೮೮ರ ವರೆಗೆ ಪಾವತಿ ಮಾಡಿದ ಹಣವೆಷ್ಟು ಎಂದು ಕೇಳಿದರೆ ನೀವು ಆ ವಿಚಾರ ಹೇಳಲಿಲ್ಲ. ಯೋಜನೆ ಮತ್ತು ಯೋಜನೇತರ ವೆಚ್ಚಕ್ಕೆ ಹೋಗಿದ್ದೀರಿ. Actually your answer is not apt to the question that is put by Hon. Member Sri Basavalingappa. ಅದಕ್ಕೋಸ್ಕರ ಇದು ಬಹಳ ಮುಖ್ಯ. ೧-೩-೮೮ರ ವರೆಗೆ ಎಷ್ಟು ಹಣವನ್ನು ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದೀರಿ ಎಂದು ಹೇಳುವುದು ಬಹಳ ಒಳ್ಳೆಯದೂ ನಿಮ್ಮ ಉತ್ತರದಲ್ಲಿ ಅದು ಇಲ್ಲ ಈಗ ಆ ವಿವರ ಇಲ್ಲದಿದ್ದರೆ ಈ ಪ್ರಶ್ನೆಯನ್ನು ವಿತ್‌ಹೋಲ್ಡ್ ಮಾಡಿ. ನಿಮಗೆ ಹೊಸದಾಗಿ ಈ ಜವಾಬ್ದಿ ಬಂದಿದೆ ನೀವು ಕಾಲ ತೆಗೆದುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಕೇಳಿದ ಪ್ರಶ್ನೆಗೆ ಉತ್ತರ ಹೇಳುತ್ತೇನೆ.

MR. SPEAKER.—Half an hour discussion ಸೂಚನೆಯನ್ನು ಕೊಡಿ.

ಶ್ರೀ ಎಸ್. ಬಂಗಾರಪ್ಪ.—ಆಗಬಹುದು. Half an hour discussion ಗೆ ಕೊಡಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾದದ್ದು ಮಾನ್ಯ ಬಸವಲಿಂಗಪ್ಪನವರು ಹೇಳಿದ್ದುದು ಸರಿಯಾಗಿದೆ. ೬೮.೮೭ ಕೋಟಿ ಬಾಕಿ ಇದೆ. ಇದನ್ನು ಯಾವಾಗ ಕೊಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಇರಲಿಲ್ಲ, ನಾವು ಹೇಳಿದ್ದೇವೆ. ೧-೪-೮೯ರಲ್ಲಿ ಇರಿಗೇಶನ್ ಡಿಪಾರ್ಟ್‌ಮೆಂಟ್‌ನಲ್ಲಿ ೫೮ ಕೋಟಿ ಇದ್ದದ್ದು ೨೧ ಕೋಟಿಯಾಗಿದೆ. ೩೧ ಕೋಟಿ ಕೊಟ್ಟಿದ್ದೇವೆ. ನ್ಯಾಷನಲ್ ಹೈವೇನಲ್ಲಿ ೪ ಕೋಟಿ ಎಲ್ಲಾ ಕೊಟ್ಟುಬಿಟ್ಟಿದ್ದೇವೆ. ಬಾಕಿ ಏನೂ ಇಲ್ಲ. ಬಿಲ್ಡಿಂಗ್ ಅಂಡ್ ಕಮ್ಯುನಿಕೇಶನ್‌ನಲ್ಲಿ ೧೫ ಕೋಟಿ ೭೮ ಲಕ್ಷ ಇದೆ. ಅದನ್ನು ಹೇಳಿದ್ದೇನೆ. ಆಮೇಲೆ ಇರಿಗೇಶನ್ ಡಿಪಾರ್ಟ್‌ಮೆಂಟಿನದ್ದು ಡಿಮ್ಯಾಂಡ್ಸ್ ಬರುತ್ತದೆ. ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ತಮಗೆ ಬೇಕಾದಷ್ಟು ಅವಕಾಶ ಇದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರಿಗೆ ನಾನೂ ನೇರವಾಗಿ ಒಂದು ಪ್ರಶ್ನೆಯನ್ನು ಹಾಕಿದ್ದೇನೆ. ಕಂಟ್ರಾಕ್ಟರ್ಸ್‌ಗೆ ಎಷ್ಟು ಕೊಟ್ಟಿದ್ದೀರಿ. ಇಲಾಖೆಯ ಕೆಲಸಕ್ಕೆ ಎಷ್ಟು ಕೊಟ್ಟಿದ್ದೀರಿ ಎಂದು ಹೇಳುವುದಕ್ಕೆ ಆಗುತ್ತದೆಯೆ ? ಇಲ್ಲವೆಂದರೆ ಅರ್ಧಗಂಟೆ ಚರ್ಚೆಗೆ ಇದನ್ನು ತೆಗೆದುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಬಿಲ್ಡಿಂಗ್ ಡಿವಿಜನ್‌ನಲ್ಲಿ ೧೫ ಕೋಟಿಯೆಂದೇ ಇಟ್ಟುಕೊಳ್ಳಿ, ಇದನ್ನು ಯಾವಾಗ ಕೊಡುತ್ತೀರಿ ? ಈಗ ಮೂರು ನಾಲ್ಕು ವರ್ಷಗಳಿಂದ ಕೊಡುತ್ತೇವೆ ಎಂದು ಹೇಳಿ ಮುಂದೆ ಹಾಕಿಕೊಂಡೇ ಹೋಗುತ್ತಿದ್ದೀರಿ. ಇದನ್ನು ಯಾವಾಗ ಕ್ಲಿಯರ್ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟು ಬೇಗ ಕೊಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಆದಷ್ಟು ಬೇಗ ಎಂದರೆ ಯಾವಾಗ ? ಒಂದು ವರ್ಷ ಆಗಬಹುದು, ಎರಡು ವರ್ಷ ಆಗಬಹುದು. ಇನ್ನು ಒಂದೆರಡು ತಿಂಗಳಲ್ಲಿ ಕ್ಲಿಯರ್ ಮಾಡುತ್ತೀರಾ ?

(ಉತ್ತರ ಇಲ್ಲ)

ಪ್ರಶ್ನೆ ೧೩೩೫—ಮಾನ್ಯ ಸದಸ್ಯರಾದ ಶ್ರೀ ಶಿವಾನಂದ ಹೆಜ್. ಕೌಜಲಗಿ ಹಾಜರಿರಲಿಲ್ಲ.

೧ ರಿಂದ ೭ನೇ ತರಗತಿಗಳನ್ನು ಆಂಗ್ಲ ಮಾಧ್ಯಮದಲ್ಲಿ ತೆರೆದು ನಡೆಸುತ್ತಿರುವ ಸಂಸ್ಥೆಗಳಿಗೆ ಆಂಗ್ಲ ಮಾಧ್ಯಮದ ಪ್ರೌಢ ಶಾಲೆ ತೆರೆಯಲು ಅನುಮತಿ ನೀಡುವುದು.

೧೩೧೨. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ) ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆಂಗ್ಲ ಮಾಧ್ಯಮದ ತರಗತಿ ೧ ರಿಂದ ೭ ರವರೆಗೆ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವುದಾಗಿ ಭರವಸೆಯನ್ನು ಕೊಟ್ಟಿದ್ದಾಗ್ಯೂ ಅದರಂತೆ ೮ನೇ ತರಗತಿಯನ್ನು ಈಗಾಗಲೇ ಪ್ರಾರಂಭಿಸಿರುವ ಶಿಕ್ಷಣ ಸಂಸ್ಥೆಗಳಿಗೆ ಇನ್ನೂ ಮಂಜೂರಾತಿ ನೀಡದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಇವರುಗಳಿಗೆ ಮಂಜೂರಾತಿ ಯಾವಾಗ ನೀಡಲಾಗುವುದು.

ಇ) ಮಂಜೂರಾತಿ ನೀಡದೆ ಹೋದರೆ ಅಂತಹ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ರಾಜ್ಯ ಸಚಿವರು).—

ಅ) ಬಂಡಿದೆ

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಮಾನ್ಯತೆ ಪಡೆಯದ ಶಾಲೆಗಳಲ್ಲಿ ದಾಖಲಾತಿ ಹೊಂದಿರುವುದಕ್ಕೆ ಪೋಷಕರು ಮತ್ತು ವಿದ್ಯಾರ್ಥಿಗಳೆ ಹೊಣೆಯೇ ಹೊರತು ಸರ್ಕಾರವಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಆಂಗ್ಲ ಮಾಧ್ಯಮ ಶಾಲೆಗೆ ಅನುಮತಿಯನ್ನು ಕೊಡತಕ್ಕದ್ದು ಮಾಮೂಲಿ ವಿಷಯ ಅಲ್ಲ,

MR. SPEAKER.—The member is satisfied with the reply given.

ಶ್ರೀ ಎಂ. ವೀರಪ್ಪ ಮೊಯಿಲಿ.—ಹೌಸ್ ಸಾಟಿಸ್ಫೈ ಆಗಬೇಕಲ್ಲ ? ಸದಸ್ಯರ ಪ್ರಶ್ನೆ ಅಲ್ಲ. ಮಾನ್ಯ ಅಧ್ಯಕ್ಷರೇ, ಈಗ ಆಂಗ್ಲ ಮಾಧ್ಯಮ ಶಾಲೆಯ ವಿಚಾರವಾಗಿ ಪ್ರಶ್ನೆಗೆ ಉತ್ತರ ಕೊಡುತ್ತಾ ಪ್ರಾಶಸ್ತ್ಯ ಮೇಲೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ಬಗ್ಗೆ ಯಾವ ಒಂದು ಆಧಾರದ ಮೇಲೆ ಪ್ರಾಶಸ್ತ್ಯವನ್ನು ನಿಷ್ಕರ್ಶೆ ಮಾಡುತ್ತೀರಿ ? ಈ ಬಗ್ಗೆ ಏನಾದರೂ ಸರ್ಕಾರ ಯಾವ ಸಂದರ್ಭದಲ್ಲಿ ಆಂಗ್ಲ ಮಾಧ್ಯಮ ಶಾಲೆಯನ್ನು ತೆರೆಯಲು ಅನುಮತಿ ಕೊಡಬಹುದು ಎಂದು ಹೇಳಿ ಏನಾದರೂ ನಿಯಮಗಳು ಇದೆಯೇ ? ಏಕೆಂದರೆ ಹಿಂದೆ ಉತ್ತರ ಕೊಡುವಾಗ ಕ್ಯಾಬಿನೇಟ್ ಸಬ್‌ಕಮಿಟಿ ಮಾಡಿದ್ದೇವೆ ಎಂದು ಹೇಳಿದ್ದೀರಿ ಆದರೆ ಯಾವ ಆಧಾರದಮೇಲೆ ಇದನ್ನು ನಿಷ್ಕರ್ಶೆ ಮಾಡುತ್ತೀರಿ ? ಏನು ಮಾರ್ಗಸೂಚಿಯನ್ನು ಮಾಡಿದ್ದೀರಿ ? ಇದರ ಬಗ್ಗೆ ಸರ್ಕಾರದ ಅಫ್ಪಣೆಯ ಪತ್ರವನ್ನು ಸದನದಲ್ಲಿ ಹಾಜರುಪಡಿಸುತ್ತೀರಾ ? ಇಲ್ಲದಿದ್ದರೆ ಪ್ರಾಶಸ್ತ್ಯ ಎಂದರೆ ಏನು ? ಮಂತ್ರಿಗಳ ತಲೆಯಲ್ಲಿ ಇರತಕ್ಕಂಥ ಪ್ರಾಶಸ್ತ್ಯವೋ ? ಆಥವಾ ಅರ್ಜಿದಾರರ ಭಾರ ನೋಡಿಕೊಂಡು ಪ್ರಾಶಸ್ತ್ಯ ಎಂದು ಮಾಡುತ್ತೀರೊ ? ಯಾವ ಆಧಾರದ ಮೇಲೆ, ಯಾವ ಪ್ರಾಶಸ್ತ್ಯದ ಮೇಲೆ, ಮಾರ್ಗಸೂಚಿಯ ಮೇಲೆ ಆಂಗ್ಲ ಮಾಧ್ಯಮ ಶಾಲೆಯನ್ನು ಮಂಜೂರು ಮಾಡುತ್ತೀರಿ ?

ಶ್ರೀ ಬಿ. ಸೋಮಶೇಖರ್.—ಇಲ್ಲಿ ಕೇಳಿರತಕ್ಕಂಥ ಪ್ರಶ್ನೆಗೆ ಮತ್ತು ಶ್ರೀ ಮೊಯಿಲಿಯವರು ಕೇಳಿರತಕ್ಕಂಥ ಪ್ರಶ್ನೆಗೆ ಬಹಳ ವ್ಯತ್ಯಾಸ ಇದೆ. ಅವರು ಕೇಳಿರತಕ್ಕದ್ದು ಏಳನೆಯ ತರಗತಿವರೆಗೆ ಆಂಗ್ಲ ಮಾಧ್ಯಮದಲ್ಲಿ ಶಾಲೆ ನಡೆಸತಕ್ಕವರಿಗೆ ಎಂಟನೆಯ ತರಗತಿಯ ಮಂಜೂರಾತಿ ಕೊಡುವ ಬಗ್ಗೆ. ಮಾನ್ಯ ಮೊಯಿಲಿಯವರು ಹೇಳುತ್ತಿರುವುದು ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗೆ ಅನುಮತಿ ಕೊಡತಕ್ಕದ್ದರ ಬಗ್ಗೆ. ಅವರ ಪ್ರಶ್ನೆ ಬೇರೆ ಮತ್ತು ಇವರು ಕೇಳತಕ್ಕ ಪ್ರಶ್ನೆಯೂ ಬೇರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸರ್ಕಾರದ ನೀತಿ ಎಂದರೆ ಆಂಗ್ಲ ಮಾಧ್ಯಮ ಶಾಲೆಯನ್ನು ತೆರೆಯಲಿಕ್ಕೇ ಅನುಮತಿ ಕೊಡಬಾರದು ಎನ್ನುವುದು. ಇದನ್ನು ಬದಲಾವಣೆ ಮಾಡಬೇಕಾದರೆ, ಇದು ಏಳನೆಯ ಕ್ಲಾಸ್ ಇರಬಹುದು ಆಥವಾ ಎಂಟನೆಯ ಕ್ಲಾಸ್, ಹೈಸ್ಕೂಲ್ ಮಾಧ್ಯಮಿಕ ವಿದ್ಯಾಭ್ಯಾಸ

ಇರಬಹುದು. ಮಾಧ್ಯಮಿಕ ವಿದ್ಯಾಭ್ಯಾಸ it is an independent unit itself ಎಂಬನೆಯಂ ಕ್ಲಾಸ್‌ನಿಂದ ಹತ್ತನೇ ಕ್ಲಾಸ್ ಇರಬಹುದು. ಅಥವಾ ನಾಲ್ಕನೇ ಕ್ಲಾಸ್‌ನಿಂದ ಏಳನೇ ಕ್ಲಾಸ್ ಇರಬಹುದಂ ಅಥವಾ ಒಂದನೇ ಕ್ಲಾಸ್‌ನಿಂದ ನಾಲ್ಕನೇ ಕ್ಲಾಸ್ ಇರಬಹುದು.

ನಾನು ಹೇಳುವುದು, ಸರ್ಕಾರದ ಸಾಮಾನ್ಯ ನೀತಿ ಆಂಗ್ಲ ಮಾಧ್ಯಮ ಶಾಲೆಗಳನ್ನು ಕೂಡ ಬಾರದು ಎಂದು ಹೇಳುತ್ತೀರಿ. ಅದರೆ ಇಲ್ಲಿ ಆಂಗ್ಲ ಮಾಧ್ಯಮ ಶಾಲೆಯನ್ನು ಕೊಡುವುದಕ್ಕೆ ಸರ್ಕಾರದ ಮಾರ್ಗಸೂಚಿ ಬೇಡವೇ ? ಅಥವಾ ತಮ್ಮ ಖುಷಿಯಲ್ಲಿ ಕೊಡಬಹುದೇ ? ತಾವು ಯಾವರೀತಿಯ ಮಾರ್ಗಸೂಚಿಯನ್ನು ಹಾಕಿದ್ದೀರಿ ? ಅಂತಹ ಸರ್ಕಾರದ ಆದೇಶವನ್ನು ಈ ಸದನದ ಮುಂದು ಇಡುತ್ತೀರಾ ? ಈ ಪ್ರಶ್ನೆ ಪ್ರಶ್ನೆಕವಾದ ಪ್ರಶ್ನೆ ಆಗುವುದಿಲ್ಲ. ಇದೂಕೂಡ ಸರ್ಕಾರದ ಭಾಷಾ ನೀತಿಗೆ ಸಂಬಂಧಪಟ್ಟ ಪ್ರಶ್ನೆ.

ಶ್ರೀ ಬಿ. ಸೋಮಂಶೇಖರ್.—ಒನೇ ತರಗತಿಯಿಂದ ಒನೇ ತರಗತಿಯವರೆಗೆ ನಡೆಯುವ ಆಂಗ್ಲ ಮಾಧ್ಯಮ ಶಾಲೆಗಳಿಗೆ ೮ನೇ ತರಗತಿಯನ್ನು ಕೊಡತಕ್ಕಂಥ ಪ್ರಶ್ನೆ ಇದು. ಹೊಸದಾಗಿ ಪ್ರಾಥಮಿಕ ಶಾಲೆಗಳಲ್ಲಿ ಆಂಗ್ಲ ಮಾಧ್ಯಮವನ್ನು ಕೊಡುವ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಅಲ್ಲದೆ ಹೊಸದಾಗಿ ಆಂಗ್ಲ ಮಾಧ್ಯಮದ ಪ್ರಾಥಮಿಕ ಶಾಲೆಗಳಿಗೆ ಅನುಮತಿ ಕೊಡುತ್ತಾ ಇಲ್ಲ. ಒನೇ ತರಗತಿಯವರೆಗೆ ಹಾಲಿ ಇಂಗ್ಲೀಷ್ ಮಾಧ್ಯಮದಲ್ಲಿ ನಡೆಯುವ ಶಾಲೆಗಳಲ್ಲಿ ೮ನೇ ತರಗತಿಗೂ ಆಂಗ್ಲಮಾಧ್ಯಮ ಕೊಡತಕ್ಕ ಪ್ರಶ್ನೆ ಇದು. ಇನ್ನೂ ಒನೇ ತರಗತಿಗಳವರೆಗೆ ಈ ಆಂಗ್ಲಮಾಧ್ಯಮಕ್ಕೆ ನಾವು ಅನುಮತಿ ಕೊಟ್ಟಿಲ್ಲ, ಹಿಂದೆಯೇ ಕೊಟ್ಟಿದೆ. ಆದ್ದರಿಂದ ೮ನೇ ತರಗತಿಯವರೆಗೆ ಆಂಗ್ಲ ಮಾಧ್ಯಮವನ್ನು ಕೊಡುವುದನ್ನು ಪರಿಗಣಿಸಬೇಕಾಗುತ್ತದೆ. ಈ ರೀತಿ ಯಾರು ಕೇಳಿರುತ್ತಾರೆ ಅಂತಹವರಿಗೆ ಕೊಡುತ್ತೇವೆ. ಹೊಸದಾಗಿ ಕೊಡುವುದಕ್ಕೆ ನಿಯಮಗಳಲ್ಲಿ ನಾವು ಯಾವುದೇ ಬದಲಾವಣೆ ಮಾಡಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—೮ನೇ ಕ್ಲಾಸ್ ಎಂದರೆ, ಅದು ಹೈಸ್ಕೂಲು ಮಟ್ಟದ ವಿದ್ಯಾಭ್ಯಾಸ ಹಾಗಾದರೆ ಸಾರಾಸಗಟಾಗಿ ತಮಗೆ ಖುಷಿ ಬಂದಹಾಗೆ ಅನುಮತಿ ಕೊಡಬಹುದೇ ?

ಶ್ರೀ ಬಿ. ಸೋಮಶೇಖರ್.—ಒನೇ ತರಗತಿಯವರೆಗೆ ನಡೆಯುವ ಎಲ್ಲಾ ಶಾಲೆಗಳಿಗೂ ೮ನೇ ತರಗತಿಗೆ ಅನುಮತಿ ಕೊಡಬೇಕು ಎಂದಲ್ಲ. ಅದಕ್ಕೆ ಕೆಲವು ದಿಕ್ಸೂಚಿಯನ್ನು ಹಾಕುತ್ತೇವೆ. ಯಾವ ಯಾವ ಶಾಲೆಗಳಿಗೆ ಕೊಡಬೇಕು, ಶಾಲೆಗಳಲ್ಲಿ ಎಷ್ಟು ವಿದ್ಯಾರ್ಥಿಗಳ ಸಂಖ್ಯೆ ಇರಬೇಕು, ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ಎಷ್ಟು ಅಂತರ ಇರಬೇಕು, ಈ ಎಲ್ಲಾ ಅಂಕಿ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು, ಅರ್ಹತೆಯ ಆಧಾರದ ಮೇಲೆ ಕೊಡುತ್ತೇವೆ. ಅಲ್ಪಸಂಖ್ಯಾಂತರ ಶಾಲೆಗಳು, ಮತ್ತು ಹೊರಗಡೆಯಿಂದ ಬಂದಿರತಕ್ಕಂಥ ಮಕ್ಕಳ ವಿದ್ಯಾಭ್ಯಾಸದ ಅನುಕೂಲಕ್ಕೋಸ್ಕರ ಈ ರೀತಿ ಕೊಡುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಸ್ಪಷ್ಟವಾಗಿ ಕೇಳಿದ್ದೇನೆ. ತಾವು ಕೆಲವೊಂದು ದಿಕ್ಸೂಚಿ ಹಾಕುತ್ತೇವೆಂದು ಹೇಳಿದ್ದೀರಿ. ಅದು ಮಂತ್ರಿಗಳ ಖುಷಿಯೇ ದಿಕ್ಸೂಚಿಯೇ ಅಥವಾ ಸರ್ಕಾರದ ಭಾಷಾ ನೀತಿಯ ಅದ್ಯತೆಯನ್ನು ಅನುಸರಿಸಿ, ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದರೆ, ಅದನ್ನು ಸದನದ ಮುಂದೆ ಇಡಿ.

ಶ್ರೀ ಬಿ. ಸೋಮಶೇಖರ್.—ಒಂದಂ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಸುತ್ತೇನೆ. ಯಾವುದೇ ಪ್ರೌಢಶಾಲೆಗಳವರು ಆಂಗ್ಲಮಾಧ್ಯಮಕ್ಕೆ ಕೇಳಿಕೊಳ್ಳುತ್ತಾರೆ, ಅವರಿಗೆ ಮಂತ್ರಿಗಳು ಕೊಡಬೇಕಾದುದು ಇಲ್ಲ. ಇದಕ್ಕೆ ಉನ್ನತ ಮಟ್ಟದ ಅಧಿಕಾರಗಳ ಮಟ್ಟದಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಅವರಿಗೆ ಕೆಲವೊಂದು ದಿಕ್ಸೂಚಿಯನ್ನು ಕೊಟ್ಟಿದ್ದೇವೆ. ಅವರ ಶಿಫಾರಸ್ಸಿನ ಮೇರೆಗೆ, ಕೊಡುತ್ತಿದ್ದೇವೆ. ನೇರವಾಗಿ ಮಂತ್ರಿಗಳು ಯಾವುದೇ ಒತ್ತಡದ, ರಾಜಕೀಯ ಒತ್ತಡದ ಮೇಲೆ ಶಾಲೆಗಳಿಗೆ ಮಾನ್ಯತೆ ಕೊಡುವುದಿಲ್ಲ. ಶೈಕ್ಷಣಿಕ ಆಧಾರದ ಮೇಲೆ ಕೊಡುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ಆ ದಿಕ್ಸೂಚಿಯು ಸರ್ಕಾರಿ ಆದೇಶ ಮಾಡಿದ್ದರೆ, ಅದನ್ನು ಈ ಸದನದ ಮುಂದೆ ಇಡಿ ಎಂದು ಕೇಳುತ್ತಿದ್ದೇನೆ.

SRI J.A. FERNANDEZ.—I would suggest little more discussion on this matter because there are much more issues involved. The first

question itself is not answered and the hon. member is not present. The other question is also raised and the hon. member is not there. I would suggest on the question of continuation of English from 7th standard plus the Government policy on English Medium Education be thoroughly discussed. Half an hour discussion may kindly be permtted.

ಶ್ರೀ ಜಿ. ಮಾದೇಗೌಡ.— ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ೧ ರಿಂದ ೭ನೇ ತರಗತಿವರೆಗೆ ಇಂಗ್ಲಿಷ್ ಮಾಧ್ಯಮದಲ್ಲಿ ಓದತಕ್ಕ ವಿದ್ಯಾರ್ಥಿಗಳು ಏನಿದ್ದಾರೆ, ಅವರಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಅವಕಾಶ ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಕಾನೂನಿನ ಪ್ರಕಾರ ಬೇರೆ ಯಾವುದೇ ಶಾಲೆಗಳಿಗೆ ಅನುಮತಿ ಕೊಡುತ್ತಿಲ್ಲವೆಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಇಂದಂ ಅನೇಕ ಶಾಲೆಗಳಲ್ಲಿ, ಪಿ ಯು.ಸಿ.ಯಿಂದ ಡಿಗ್ರಿಯವರೆಗೆ ಅಂದರೆ, ಪಿ.ಯು.ಸಿ. ಎರಡು ವರ್ಷ, ಡಿಗ್ರಿ ಮೂರು ವರ್ಷ, ಇಂಗ್ಲಿಷ್ ಮಾಧ್ಯಮದಲ್ಲಿ ಇರುವ ಶಾಲೆಗಳು ಇವೆ. ಇಂತಹ ಶಾಲೆಗಳಲ್ಲೂ, ೧ ರಿಂದ ೭ನೇ ತರಗತಿವರೆಗೆ, ಇಂಗ್ಲೀಷ್ ಮಾಧ್ಯಮಕ್ಕೆ ಅವಕಾಶ ಮಾಡಿಕೊಡುತ್ತೀರಾ ?

೧೧–೨೦ ಎ.ಎಂ.

ಅಂತಹ ಶಾಲೆಗಳಿಗೆ ತಾವು ಇಂಗ್ಲೀಷ್ ಮಿಡಿಯಂ ತೆಗೆಯಂವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ? ತಾವು ನನ್ನ ಪ್ರಶ್ನೆಯಾನ್ನು ಅರ್ಥ ಮಾಡಿಕೊಂಡಿರಿ ಎಂದು ಕಾಣುತ್ತದೆ. ೧ ರಿಂದ ೭ನೇ ತರಗತಿಯವರೆಗೆ ಇಂಗ್ಲೀಷ್ ಮಿಡಿಯಂ ಯಾವ ಯಾವ ಶಾಲೆಗಳಲ್ಲಿ ಇವೆ, ಆ ಶಾಲೆಗಳಲ್ಲಿ ೮ ರಿಂದ ೧೦ನೇ ತರಗತಿಯವರೆಗೆ ಇಂಗ್ಲೀಷ್ ಮಿಡಿಯಂನಲ್ಲಿ ವಿದ್ಯಾಭ್ಯಾಸ ಮುಂದುವರಿಸುವುದಕ್ಕೆ ಅವಕಾಶ ಮಾಡುವುದಕ್ಕಾಗಿ ಅಲ್ಲಿ ಇಂಗ್ಲೀಷ್ ಮಿಡಿಯಂ ಪ್ರಾರಂಭ ಮಾಡಲವುದಕ್ಕೆ ಅನುಮತಿಯನ್ನು ಕೊಡುವುದಕ್ಕೆ, ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ. ಇದನ್ನು ನಾನು ಒಪ್ಪುತ್ತೇನೆ. ೧ ರಿಂದ ೭ನೇ ತರಗತಿಯವರೆಗೆ ಇಂಗ್ಲೀಷ್ ಮಿಡಿಯಂನಲ್ಲಿ ಓದಿದ ವಿದ್ಯಾರ್ಥಿಗಳಿಗೆ ಮುಂದೆ ೮ ರಿಂದ ೧೦ನೇ ತರಗತಿಯವರೆಗೆ ಇಂಗ್ಲೀಷ್ ಮಿಡಿಯಂನಲ್ಲೇ ಓದುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದು ಸಾಧುವಾದ ವಿಷಯ. ಪಿ.ಯು.ಸಿ., ಬಿ.ಎ ಬಿ.ಎಸ್.ಸಿ.ವರೆಗೆ ಶಿಕ್ಷಣ ನೀಡತಕ್ಕ ಶಾಲೆಗಳೇನಿವೆ ಅವುಗಳಲ್ಲಿ ಪಿ.ಯು.ಸಿ. ಮತ್ತು ಡಿಗ್ರಿ ಲೆವೆಲ್‌ನಲ್ಲಿ ಇಂಗ್ಲೀಷ್ ಮಿಡಿಯಂ ಇದ್ದು, ಎಸ್.ಎಸ್.ಎಲ್.ಸಿ.ವರೆಗೆ ಕನ್ನಡ ಮಿಡಿಯಂನಲ್ಲಿ ಓದಿಕೊಂಡು ಬರಬೇಕಾಗಿದೆ. ಆದುದರಿಂದ ಈ ಪಿ.ಯು.ಸಿ., ಡಿಗ್ರಿ ಲೆವೆಲ್‌ನಲ್ಲಿ ಇಂಗ್ಲೀಷ್ ಮಿಡಿಯಂ ಇರುವ ಶಾಲೆಗಳಲ್ಲಿ ಹೈಸ್ಕೂಲ್‌ವರೆಗೆ ಇಂಗ್ಲೀಷ್ ಮಿಡಿಯಂನಲ್ಲಿ ಕಲಿಯುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಬಿ. ಸೋಮಶೇಖರ್.—ಅದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಸಾಧ್ಯವಿಲ್ಲ. ಪಿ.ಯು.ಸಿ., ಡಿಗ್ರಿ ಇಂಗ್ಲೀಷ್ ಮಿಡಿಯಂನಲ್ಲಿ ಇರತಕ್ಕ ಕಾಲೇಜುಗಳೇನಿವೆ, ಅಲ್ಲಿ ಪ್ರಾಥಮಿಕ ಶಾಲೆಯಿಂದ ಹೈಸ್ಕೂಲ್‌ವರೆಗೆ ಇಂಗ್ಲೀಷ್ ಮಿಡಿಯಂ ಪ್ರಾರಂಭಿಸಲು ಅವಕಾಶ ಮಾಡಿಕೊಡಬೇಕೆಂಬ ಅವರ ವಾದ ಏನಿದೆ ಇದನ್ನು ನಾನು ಒಪ್ಪುವುದಿಲ್ಲ. ಎಲ್ಲಿ ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ ಇಂಗ್ಲೀಷ್ ಮಿಡಿಯಂನಲ್ಲಿ ಹುಡುಗರು ಓದುತ್ತಿದ್ದಾರೆ ಅಂತಹ ಕಡೆ ಮಕ್ಕಳಿಗೆ ಅನುಕೂಲವಾಗಲೆಂದು, ಅದೇ ಶಾಲೆಯಲ್ಲಿ ೮ನೇ ತರಗತಿಯಿಂದ ಅರ್ಹತೆ ಆಧಾರದ ಮೇಲೆ ನಾವು ಇಂಗ್ಲೀಷ್ ಮಿಡಿಯಂ ಪ್ರಾರಂಭ ಮಾಡುವುದಕ್ಕೆ ಅನುಮತಿಯನ್ನು ಕೊಡುತ್ತೇವೆ. ಕಾಲೇಜುಗಳಲ್ಲಿ ಕೆಳಗಡೆ ಇರತಕ್ಕಂಥ ಶಾಲೆಗಳಿಗೆ ಇಂಗ್ಲೀಷ್ ಮಿಡಿಯಂ ಪ್ರಾರಂಭ ಮಾಡಲು ಅವಕಾಶ ಕೊಡುವುದಿಲ್ಲ.

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ,.....

ಅಧ್ಯಕ್ಷರು.—ಮಾನ್ಯ ಮಾದೇಗೌಡರೇ ತಪಂಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಟೈಮ್ ಆಯಿತು, ಈಗ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ, ಇದು ಪ್ರಮುಖವಾದ ವಿಷಯ. ೧ನೇ ತಾರೀಖಿನಿಂದ ಸ್ಕೂಲುಗಳು ಪ್ರಾರಂಭವಾಗುತ್ತಿವೆ. ೧ನೇ ತಾರೀಖು ಎಂದರೆ ಇನ್ನು ನಾಲ್ಕೈದು ದಿವಸ ಉಳಿಯಿತು, ನಾಳೆ ಶಾಲೆಗಳವರು ಅಪ್ಲಿಕೇಷನ್ಸ್ ಕರೆದು ಹುಡುಗರನ್ನು ಇಂಗ್ಲೀಷ್ ಮಿಡಿಯಂಗೆ ಸೇರಿಸಿಕೊಳ್ಳು

ಬೇಕೆಂದೂ ಇದ್ದಾರೆ. ಇನ್ನೂ ಕೊಡಾ ಇವರು ತಮ್ಮ ರಾಜಕೀಯ ತಾಪತ್ರಯದೊಳಗೆ ಸಿಕ್ಕಿಹಾಕಿ ಕೊಂಡು, ಅಧಿಕಾರ ಉಳಿಸಿಕೊಳ್ಳುವ ತಾಪತ್ರಯದೊಳಗೆ ಇದ್ದು, ಸರಕಾರದ ಪಾಲಿಸಿ ಏನು ಎಂಬುದನ್ನೇ ಹೇಳುತ್ತಿಲ್ಲ. ಈಗಾಗಲೆ ಶಾಲೆಗಳನ್ನು ಪ್ರಾರಂಭ ಮಾಡುತ್ತಿದ್ದಾರೆ, ಅವರು ಯಾವಾಗ ಆರ್ಡರ್ ತೆಗೆದುಕೊಳ್ಳಬೇಕು, ಯಾವಾಗ ಪರಿಶೀಲನೆ ಮಾಡಬೇಕು ?

ಶ್ರೀ ಬಿ. ಸೋಮಪ್ಪಶೇಖರ್.—ಅಧ್ಯಕ್ಷರೇ, ಸರಕಾರದ ನೀತಿ ಏನು ಎಂಬುದು ಈಗಾಗಲೇ ಸ್ಪಷ್ಟ ವಾಗಿದೆ. ಸರಕಾರದ ನೀತಿ ಏನಿದೆ ಅದರ ಪ್ರಕಾರವಾಗಿ, ಸರಕಾರದಿಂದ ಅನುಮತಿಯನ್ನು ತೆಗೆದು ಕೊಳ್ಳದೇ ಶಾಲೆಗಳನ್ನು ಪ್ರಾರಂಭ ಮಾಡಿ ಆರ್ಡರ್‌ಗಳನ್ನು ತೆಗೆದುಕೊಳ್ಳಬೇಕೆಂದು ಇದ್ದರೆ ಆದು ತಪ್ಪಾಗುತ್ತದೆ ಹಾಗೂ ಕಾನೂನು ಬಾಹಿರವಾಗುತ್ತದೆ. ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಸರಕಾರದ ಅನುಮತಿ ಪಡೆದ ಮೇಲೆ ಮಾತ್ರವೇ ಶಾಲೆಗಳನ್ನು ಪ್ರಾರಂಭ ಮಾಡಬೇಕು. ಮಾನ್ಯ ಮಾದೇಗೌಡರು ಹೇಳಿದ ಹಾಗೆ ಮೊದಲೆ ಅಡ್ಮಿಷನ್ ಮಾಡಿಕೊಂಡಿದ್ದೇವೆ, ಅನುಮತಿ ಕೊಡಿ ಎಂದು ಕೇಳಿದರೆ ಅದು ತಪ್ಪಾಗುತ್ತದೆ ಈ ವಿಚಾರದಲ್ಲಿ ಸರಕಾರದ ನೀತಿ ಸ್ಪಷ್ಟವಾಗಿದೆ ೧ನೇ ತರಗತಿಯಿಂದ ೭ನೇ ತರಗತಿಯವರೆಗೆ ಹೊಸದಾಗಿ ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ಕೊಡುವುದಿಲ್ಲ. ೧ ರಿಂದ ೭ನೇ ತರಗತಿಯವರೆಗೆ ಇಂಗೀಷ್ ಮಿಡಿಯಂ ಇರುವ ಕಡೆ ೮ ರಿಂದ ೧೦ನೇ ತರಗತಿಯವರೆಗೆ ಇಂಗ್ಲೀಷ್ ಮಿಡಿಯಂ ಪ್ರಾರಂಭಿಸಲು, ಆರ್ಹತೆಯ ಆಧಾರದ ಮೇಲೆ ಅನುಮತಿಯನ್ನು ಕೊಡುತ್ತೇವೆ. ಇದರ ಬಗ್ಗೆ ಉನ್ನತವಟ್ಟದ ಸಮಿತಿ ಮಾಡುತ್ತೇವೆ. ಅರ್ಹತೆಯ ಆಧಾರದ ಮೇಲೆ ಪರಿಶೀಲನೆ ಮಾಡಿ ಅನುಮತಿಯನ್ನು ಕೊಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಇದು ಬಹಳ ಪ್ರಾಮುಖ್ಯವಾದ ವಿಷಯ.

ಅಧ್ಯಕ್ಷರು.—ಮಾನ್ಯ ಖಿರ್ಗೆಯವರೇ ನೀವೇ ಹೇಳಿ, ಎಷ್ಟು ಸಲ ಒಂದು ಕೊಶ್ಚನ್‌ಗೆ ಅವಕಾಶ ಮಾಡಿಕೊಡುವುದು. ಸಾಕಷ್ಟು ಅವಕಾಶ ಮಾಡಿಕೊಟ್ಟಿದ್ದೇವೆ. ಕಮಿಟಿ ನೇಮಿಸುತ್ತೇವೆ, ಅವರಿಗೆ ಇನ್‌ಸ್ಟ್ರಕ್ಷನ್ಸ್ ಕೊಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎಂ, ವಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಕಮಿಟಿ ನೇಮಿಸಿದರೂ ಸಹ ಇವರು ಒಂದು ವಿಚಾರವನ್ನು ಗಮನದಲ್ಲಿ ಇಟ್ಟುಕೊಂಡಿಲ್ಲ. ೧ ರಿಂದ ೭ನೇ ಸ್ಟ್ಯಾಂಡರ್ಡ್‌ವರೆಗೆ ಇಂಗ್ಲೀಷ್ ಮಿಡಿಯಂ ಇದ್ದಕಡೆ ಹೈಸ್ಕೂಲ್‌ನಲ್ಲಿ ಇಂಗ್ಲೀಷ್ ಮಿಡಿಯಂ ಪ್ರಾರಂಭಿಸಲು ಅನುಮತಿ ಕೊಡ ಬೇಕೆಂದು ಮಾಡಿದ್ದೇವೆ ಎಂದು ಹೇಳಿದ್ದಾರೆ. ಈಗ ಹೊಸದಾಗಿ ಹೈಸ್ಕೂಲುಗಳನ್ನು ಕೊಡತಕ್ಕದ್ದು ಹೇಗೆ ಎಂದರೆ, ಫೀಡಿಂಗ್ ಸ್ಕೂಲ್‌ಗಳು ಇದ್ದರೆ ಮಾತ್ರ ಹೈಸ್ಕೂಲುಗಳನ್ನ ಕೊಡಬೇಕು. ಒಂದರಿಂದ ಏಳನೇ ತರಗತಿಯವರೆಗಿನ ಎಂಟು ಹತ್ತು ಫೀಡಿಂಗ್ ಸ್ಕೂಲ್ಸ್ ಇದ್ದಾಗ ಮಾತ್ರ ಒಂದು ಹೈಸ್ಕೂಲ್ ಕೊಡುತ್ತೀರಿ. ಈಗ ಒಂದರಿಂದ ಏಳನೇ ತರಗತಿಯವರೆಗೆ ಇಂಗ್ಲೀಷ್ ಮಿಡಿಯಂ ಇರತಕ್ಕ ಶಾಲೆಗಳಿಗೆ ಹೈಸ್ಕೂಲ್ ಪ್ರಾರಂಭಿಸಲು ಅನುಮತಿ ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ನೀವು ಈ ರೀತಿ ಅವಕಾಶ ಕೊಟ್ಟರೆ, ಉಳಿದಂಥ ಹೈಸ್ಕೂಲುಗಳಿಗೆ ಫೀಡಿಂಗ್ ಸ್ಕೂಲ್ಸ್ ಎಲ್ಲಿ ಬರುತ್ತದೆ ? ಯಾವ ಆಧಾರದ ಮೇಲೆ ನೀವು ಹೈಸ್ಕೂಲುಗಳನ್ನು ಕೊಡುತ್ತೀರಿ ?

ಶ್ರೀ ಬಿ. ಸೋಮಶೇಖರ್.—ನಾವು ಎಲ್ಲಾ ಸ್ಕೂಲುಗಳಿಗೂ ಅನುಮತಿ ಕೊಡುವುದಿಲ್ಲ. ಎಲ್ಲಿ ಒಂದರಿಂದ ಏಳನೇ ತರಗತಿಯವರೆಗೆ ಇಂಗ್ಲೀಷ್ ಮಿಡಿಯಂ ಇದೆ ಅಲ್ಲಿಗಲ್ಲಾ ನಾವು ಹೈಸ್ಕೂಲುಗಳನು ಪ್ರಾರಂಭಿಸಲು ಅನುಮತಿಯನ್ನು ಕೊಡುವುದಿಲ್ಲ. ಇದಕ್ಕೆ ಒಂದು ದಿಕ್ಸೂಚಿಯನ್ನು ಗೊತ್ತುಮಾಡಿ, ಆ ದಿಕ್ಸೂಚಿಯ ಆಧಾರದ ಮೇಲೆ ಹೈಸ್ಕೂಲುಗಳನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಲು ಪರಿಗಣಿಸುತ್ತೇವೆ ಎಂದು ಹೇಳಿದ್ದೇನೆ. ಎಲ್ಲರಿಗೂ ಅನುಮತಿಯನ್ನು ಕೊಡುತ್ತೇವೆ ಎಂದು ನಾನು ಹೇಳಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ —ಅಧ್ಯಕ್ಷರೇ, ಮಾನ್ಯ ಖಿರ್ಗೆಯವರ ಪ್ರಶ್ನೆಗೆ ಪೂರಕವಾಗಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ೫ ರಿಂದ ೧೦ನೇ ತರಗತಿಯವರೆಗೆ ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ತೆರೆಯುವುದಕ್ಕೆ ಅನುಮತಿಯನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ, ಹಾಗಿದ್ದರೆ ೧ ರಿಂದ ೫ರವರೆಗೆ ಇಂಗ್ಲೀಷ್ ಮಿಡಿಯಂ ಶಾಲೆಗಳು ಬೇಕಾಗಿಲ್ಲವೋ ? ಒಂದರಿಂದ ಐದನೇ ತರಗತಿಯವರೆಗೆ ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ಪ್ರಾರಂಭಿಸಲು ಅನುಮತಿಯನ್ನು ಏತಕ್ಕೆ ಕೊಡಬಾರದು ?

ಶ್ರೀ ಬಿ. ಸೋಮಶೇಖರ್.—ಇದುವರೆಗೆ ಎಷ್ಟು ಈ ರೀತಿಯ ಇಂಗ್ಲೀಷ್ ವಿಾಡಿಯಂ ಶಾಲೆಗಳಿವೆ ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಅವುಗಳನ್ನು ಹೆಚ್ಚು ಮಾಡಲಿವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈಗಿರುವ ಶಾಲೆಗಳಿಗೆ ೫ ರಿಂದ ೧೦ನೇ ತರಗತಿಯವರೆಗೆ ಇಂಗ್ಲೀಷ್ ವಿಾಡಿಯಂ ಶಾಲೆಗಳನ್ನು ಪ್ರಾರಂಭಿಸಲು ಅನುಮತಿಯನ್ನು ಕೊಡುತ್ತೇವೆ ಎಂದು ಹೇಳಂತ್ತಿದ್ದೀರಿ. ಅದೇ ಒಂದರಿಂದ ಐದನೇ ತರಗತಿಯವರೆಗೆ ಇಂಗ್ಲೀಷ್ ವಿಾಡಿಯಂ ಕೊಡುವುದಕ್ಕೆ ನೀವು ಏತಕ್ಕೆ ಹೆದರುತ್ತಿದ್ದೀರಿ ?

ಶ್ರೀ ಬಿ. ಸೋಮಶೇಖರ್.—ಈಗ ಐದರಿಂದ ಏಳನೇ ತರಗತಿಯವರೆಗೆ ಎಲ್ಲೆಲ್ಲಿ ನಡೆಯುತ್ತಿದೆ, ಅಲ್ಲಿ ಅರ್ಹತೆಯ ಆಧಾರದ ಮೇಲೆ ಮುಂದಕ್ಕೆ ಅಂದರೆ ೮ ರಿಂದ ೧೦ರವರೆಗೆ ಇಂಗ್ಲೀಷ್ ವಿಾಡಿಯಂ ಪ್ರಾರಂಭಿಸಲು ಅನುಮತಿ ಕೊಡುತ್ತೇವೆ. ಇನ್ನು ಕೆಳಗಡೆ ಇರತಕ್ಕಂಥ ತರಗತಿಗಳಿಗೆ ಇಂಗ್ಲೀಷ್ ವಿಾಡಿಯಂ ಪ್ರಾರಂಭಿಸಲು ಅನುಮತಿ ಕೊಡುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಕಿತ್ತೂರು ರಾಣಿ ಚೆನ್ನಮ್ಮ ರೆಸಿಡೆನ್ಷಿಯಲ್ ಸ್ಕೂಲ್ ಇದೆ. ಅಲ್ಲಿ ೫ ರಿಂದ ೧೦ನೇ ತರಗತಿಯವರೆಗೆ ಇಂಗ್ಲೀಷ್ ಮಾಡಿಯಂಗೆ ಅನುಮತಿ ಕೊಟ್ಟಿದ್ದೀರಿ. ಅಲ್ಲಿ ೧ ರಿಂದ ೫ನೇ ತರಗತಿಯವರೆಗೆ ಇಂಗ್ಲೀಷ್ ವಿಾಡಿಯಂ ಕೊಡುವುದಕ್ಕೆ ಪ್ರತಿಬಂಧಕ ಹಾಕಿದರೆ, ಅಲ್ಲಿ ಹೋಗತಕ್ಕಂಥ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರತಿಬಂಧಕ ಹಾಕಿದಹಾಗೆ ಆಗುವುದಿಲ್ಲವೇ ? ಇಂತಹ ಶಾಲೆಗಳಿಗೆ ಒಂದರಿಂದ ಐದನೇ ತರಗತಿಯವರೆಗೆ ಇಂಗ್ಲೀಷ್ ವಿಾಡಿಯಂ ಪ್ರಾರಂಭಿಸಲು ಅನುಮತಿ ಕೊಡಲೇ ಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಪ್ರತ್ಯೇಕವಾಗಿ ಯಾವ ಒಂದು ಶಾಲೆಯನ್ನು ಪರಿಗಣಿಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರದ ಭಾಷಾ ನೀತಿಯ ಪ್ರಕಾರ ಹೊಸ ಶಾಲೆಗಳಿಗೆ ಅನುಮತಿಯನ್ನು ಕೊಡತಕ್ಕಂಥಾದ್ದು ಇಲ್ಲ.

ರಾಜ್ಯದಲ್ಲಿ ಕ್ಯಾಪಿಟೇಷನ್ ಆಧಾರಿತ ಕಾಲೇಜುಗಳು

೧೩೫೮. ಶ್ರೀ ಬಿ. ಎಂ ಇದಿನಬ್ಬ (ಉಳ್ಳಾಲ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದವರು ಕ್ಯಾಪಿಟೇಷನ್ ಆಧಾರಿತ ಕಾಲೇಜುಗಳನ್ನು ಹಂತ ಹಂತವಾಗಿ ಡಿಮೆಗೊಳಿಸುವುದಾಗಿ ಹೇಳಿದ್ದು ನಿಜವಲ್ಲವೇ ?

ಆ) ಈಗ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ (ಅಫಿಲಿಯೇಷನ್) ಹೊಂದಲು ಎಷ್ಟು ಖಾಸಗಿ ಕಾಲೇಜಗಳು ಅರ್ಜಿ ಸಲ್ಲಿಸಿವೆ ?

ಇ) ಈ ಅರ್ಜಿಗಳಿಗೆ ಸಂಯೋಜನಾ ಸಮಿತಿ ಶಿಫಾರಸ್ಸು ನೀಡಿದೆಯೇ ಹಾಗಿದ್ದಲ್ಲಿ ಎಷ್ಟು ಕಾಲೇಜುಗಳಿಗೆ ಹಾಗೂ ಸದರಿ ಸ್ಥಳಗಳಾವುವು ?

ಈ) ಕ್ಯಾಪಿಟೇಷನ್ ಆಧಾರಿತ ಹೊಸ ಕಾಲೇಜುಗಳನ್ನು ಸರ್ಕಾರದವರು ಮಾನ್ಯ ಮಾಡುತ್ತಾರೆಯೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಇಲ್ಲ. ದಿನಾಂಕ ೧೧-೭-೧೯೮೮ರ ನಂತರ ಕರ್ನಾಟಕ ವಿದ್ಯಾ ಸಂಸ್ಥೆಗಳ (ಕ್ಯಾಪಿಟೇಷನ್ ಫೀ ರದ್ದತಿ) ಕಾಯ್ದೆ ೧೯೮೮ರ ಪ್ರಕಾರ ಯಾವುದೇ ವಿದ್ಯಾ ಸಂಸ್ಥೆ ಕ್ಯಾಪಿಟೇಷನ್ ಫೀ ವಸೂಲು ಮಾಡುವ ಹಾಗಿಲ್ಲ.

ಆ) ೧೨ (ಹನ್ನೆರಡು)

ಇ) ೭ ಕಾಲೇಜುಗಳಿಗೆ ಮಾತ್ರ ಶಿಫಾರಸ್ಸು ನೀಡಿದೆ (ಏಳು) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಈ) ಯಾವುದೇ ಕಾಲೇಜನ್ನು ಕ್ಯಾಪಿಟೇಷನ್ ಆಧಾರಿತ ಕಾಲೇಜೆಂದು ಪರಿಗಣಿಸಲಾಗಿ ಮಾಡುವುದಿಲ್ಲ.